<u>ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>
<u>ಬೆಳಗಾವಿ.</u>

ಓ.ಎಸ್ ನಂಃ 900 ಃ 2013

ಡಿ. ಡಬ್ಲೂ- 1

ದಿ. 26-10-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲುಃ ಶ್ರೀ. ಬಿ ಬಿ ಪಿ. ವಕೀಲರಿಂದ ಃ-**

ನನ್ನ ತಂದೆ ಪ್ಲಾಟ ನಂ.4855ಃಬಿ 6 ಖರೀದಿಸಿದ್ದ ಬಗ್ಗೆ ನಿಡಿ-6 ರಲ್ಲಿ ಹಾಜರುಪಡಿಸಿರುತೇನೆ . ನಿಡಿ-6 ರಂತೆ ಪೂರ್ವ- ಪಶ್ಚಿಮ 52.6 ಅಡಿ , ಉತ್ತರ- ದಕ್ಷಿಣ 106 ಅಡಿ ಇರುತ್ತದೆ ಪೂರ್ವಕ್ಕೆ 106 , ಪಶ್ಚಿಮಕ್ಕೆ 105 ಅಡಿ ಇರುತ್ತದೆ ಅಂದರೆ ಸರಿ. ಸದರಿ ಪ್ಲಾಟ ಒಟ್ಟು ವಿಸ್ತೀರ್ಣ 624 ಯಾರ್ಡ ಆಗಿರುತ್ತದೆ ಅಂದರೆ ಸರಿ. ಸದರಿ ಪ್ಲಾಟನ ಚೆಕ್ಕುಬಂದಿ ಪೂರ್ವಕ್ಕೆ ವಾದಿಯ ಸ್ವತ್ತು , ಪಶ್ಚಿಮಕ್ಕೆ ರಸ್ತೆಯಿದೆ , ಉತ್ತರಕ್ಕೆ ಡಾ.ಕಪೂರೆಯವರ ಮನೆ ಮತ್ತು ದಕ್ಷಿಣಕ್ಕೆ ರವಿ ಪಾಟೀಲ ಅವರ ಮನೆ ಇರುತ್ತದೆ . ನಾನು ದಾವೆಗೆ ನನ್ನ ತಕರಾರನ್ನು ಸಲ್ಲಿಸಿದ್ದು ಅದರಲ್ಲಿ ಉತ್ತರಕ್ಕೆ ಮೂಲಿಮನಿ ಎಂದು ನಮೂದಿಸಿದ್ದೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಮೂಲಿಮನಿಯವರು ಡಾ.ಕಪೂರೆಯವರೆಯವರಿಗೆ ಮಾರಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಇದರ ಬಗ್ಗೆ ನನ್ನ ತಕರಾರಿನಲ್ಲಿ ನಮೂದಿಸಿದ ಬಗ್ಗೆ ನನಗೆ ನೆನಪಿಲ್ಲ ಮೂಲಿಮನಿಯವರು ಸ್ವಲ್ಪ ಭಾಗವನ್ನು ಮಾತ್ರ ಮಾರಿರುತ್ತಾರೆ . ನಾನು ನನ್ನ ಪ್ರಮಾಣ ಪತ್ರದಲ್ಲಿ ಈ ವಿಚಾರವನ್ನು ನಮೂದಿಸಿಲ್ಲ ಅಂದರೆ ಸರಿ. ಪಶ್ಚಿಮಕ್ಕೆ ಪ್ಲಾಟ ನಂ.5 ರಣಭೀಪ್ಪೆ ಅವರ ಮನೆ ಇದೆ ಅಂದರೆ ಸಾಕ್ಷಿಯು ಅವರು ಈಗ ಮಾರಿರುತ್ತಾರೆ ಎಂದು ನುಡಿಯುತ್ತಾರೆ . ಇದರ ಬಗ್ಗೆ ನನ್ನ ತಕರಾರಿನಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ನಮೂದಿಸಿದ ಬಗ್ಗೆ ನನಗೆ ನೆನಪಿಲ್ಲ ದಕ್ಷಿಣಕ್ಕೆ ವಾದಿಯ ಸ್ವತ್ತು ಇದೆ ಅಂದರೆ ಸರಿಯಲ್ಲ. ದಕ್ಷಿಣಕ್ಕೆ ವಾದಿಯ ಸ್ವತ್ತು ಇದೆ ಎಂದು ತಕರಾರಿನಲ್ಲಿ ನಮೂದಿಸಿದ್ದೇನೆ ಅಂದರೆ ಸರಿಯಲ್ಲ. ನನ್ನ ಖರೀದಿ ಪತ್ರದಂತೆ ದಕ್ಷಿಣಕ್ಕೆ ಖಾಲಿ ಜಾಗ ಆರ್ ಎಸ್ ನಂ.1363ಃ2 ಇರುತ್ತದೆ. ವಾದಿಯು ಆರ್.ಎಸ್ ನಂ.1363ಃ2 ನಲ್ಲಿ ಪ್ಲಾಟನ್ನು ಖರೀದಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಕರಾರಿನ ಪ್ಯಾರ ನಂ.14 ರಲ್ಲಿ ನನ್ನ ಪ್ಲಾಟನ

ದಕ್ಷಿಣಕ್ಕೆ ಆರ್ .ಎಸ್ ನಂ.1363ಃ2 ಎಂದು ನಮೂದಾಗಿದೆ ಅಂದರೆ ಸರಿ. ಉತ್ತರಕ್ಕೆ ಆರ್ .ಎಸ್ ನಂ.1363ಃ1 ಎ ಎಂದು ನಮೂದಾಗಿದೆ ಅಂದರೆ ಸರಿ. ನನ್ನ ಪ್ಲಾಟನ ಉತ್ತರಕ್ಕೆ ಇರುವ ಆರ್ .ಎಸ್ ನಂ.1363ಃ1 ಎ -ದಲ್ಲಿನ ನನ್ನ ಪ್ಲಾಟನ್ನು ನಿಡಿ-6 ರಂತೆ ನನ್ನ ತಂದೆ ಖರೀದಿಸಿರುತಾರೆ .

ನನ್ನ ತಂದೆ ಮನೆ ಕಟ್ಟಿದ ಬಗ್ಗೆ ದಾಖಲಗೆಳನ್ನು ಹಾಜರಪಡಿಸಿದ್ದೇನೆ .ನಿಡಿ-8 ನ್ನು ನನ್ನ ತಂದೆ ಮನೆ ಕಟ್ಟಲು ಮುನಿಸಿಪಾಲಿಟಿಯವರಿಂದ ಪರವಾನಗಿಯನ್ನು ಪಡೆದಿರುತ್ತಾರೆ. ನಿಡಿ-9 ರಲ್ಲಿ ನನ್ನ ಪ್ಲಾಟನ ಪೂರ್ವ - ಪಶ್ಚಿಮಕ್ಕೆ 30 ಅಡಿ , ಉತ್ತರ- ದಕ್ಷಿಣಕ್ಕೆ 75 ಅಡಿ ಎಂದು ನಮೂದಾಗಿದೆ ಅಂದರೆ ಸರಿ. ನಾವು ನಿಡಿ-9 ರಂತೆ 1 ಮತ್ತು 2 ನೇ ಮಹಡಿಯನ್ನು ಕಟ್ಟಿರುತೇವೆ . ನಮ್ಮ ತಂದೆಯವರು 1974 ರಲ್ಲಿ ಮನೆಯನ್ನು ಪೂರ್ಣಗೊಳಿಸಿ 1975 ರಲ್ಲಿ ಕಟ್ಟಡ ಪೂರ್ಣಗೊಂಡ ಬಗ್ಗೆ ಲೆಟರನ್ನು ಪಡೆದಿರುತ್ತಾರೆ . ನನ್ನ ತಂದೆ ನಮ್ಮ ಪ್ಲಾಟನ ಸುತ್ತಾ ಕಾಂಪೋಂಡ ವಾಲನ್ನು ಎಡಬದಿ ಮತ್ತು ಬಲಬದಿ ಮತ್ತು ಮುಂಬದಿ ಕಟ್ಟಿರುತ್ತಾರೆ . ನನ್ನ ತಂದೆ ನಮ್ಮ ಹದ್ದಿನ ಗುರುತಿಗೆ ಸಿಮೆಂಟ್ ಪೋಲ್ಸ್ ಮಾಡಿ ಕಬ್ಬಿಣ ತಂತಿಯನ್ನು ಅಳವಡಿಸಿದ್ದರು ಎಂದರೆ ಸರಿ ಸಾಕ್ಷಿಯು ನಂತರ ನಾನು ಗೋಡೆಯನ್ನು ಕಟ್ಟಿರುತೇನೆ ಎಂದು ನುಡಿಯುತ್ತಾರೆ . ನಾನು ಗೋಡೆಯನ್ನು ಕಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಗೋಡೆಯನ್ನು ಕಟ್ಟಲು ಪರವಾನಗಿಯನ್ನು ಪಡೆದಿಲ್ಲ ಹಾಗೂ ಪಡೆಯುವ ಅವಶ್ಯಕತೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಮಹಾನಗರ ಪಾಲಿಕೆಯಿಂದ ಪರವಾನಗಿಯನ್ನು ಪಡೆದಿದ್ದೇನೆ ಎಂದು ತೋರಿಸಲು ಹಾಗೂ ಗೋಡೆ ಕಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಅಂದರೆ ಸರಿ. ನಿಪಿ-14 ರಲ್ಲಿ ನನ್ನ ತಂದೆ ಕಟ್ಟಡ ಕಟ್ಟುವಾಗ ನಮ್ಮ ಪ್ಲಾಟನ ಹದ್ದಿನ ಗುರುತಿಗೆ ಸಿಮೆಂಟ್ ಪೋಲ್ಸ್ ಹಾಕಿರುವುದು ಕಂಡು ಬರುತ್ತದೆ ಅಂದರೆ ಸರಿ. ಸಿಮೆಂಟ್ ಪೋಲ್ಸ್ ನಂತರ ವಾದಿಯ ಸ್ವತ್ತು ಇದೆ ಅಂದರೆ ಸರಿಯಲ್ಲ ಸಾಕ್ಷಿಯು ಸರ್ವಿಸ್ ರೋಡ ನಂತರ ವಾದಿಯ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ . 1974 ರಿಂದ ಇಲ್ಲಿಯವರೆಗೂ ಸರ್ವಿಸ್ ರೋಡ ಇಲ್ಲ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.